**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 820/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಆಶಾ ಪಿ.ಎಸ್. |
| ಗಂಡನ ಹೆಸರು | : | ಶಿವಮೂರ್ತಿ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,<br>ಹೆಚ್.ಡಿ. ಕೋಟೆ. |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 28.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಡಿಸೆಂಬರ್ 2018 ರಿಂದ ಇಲ್ಲಿಯವರೆಗು ಹೆಚ್.ಡಿ. ಕೋಟೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 31.05.2020 ರಂದು ಚಾಸಾ-2 ರವರು ಚಾಸಾ-6 ರವರಿಗೆ ಕರೆ ಮಾಡಿ ದಿನಾಂಕಃ 16.04.2020 ರಂದು ತನ್ನ ಮನೆ ಅಣ್ಣೂರು ಹೊಸಳ್ಳಿ ಗ್ರಾಮದಲ್ಲಿದ್ದು, ತನ್ನ ತಾಯಿ ಮತ್ತು ಮನೆಯವರು ಕೆ.ಆರ್. ನಗರ ತಾಲ್ಲೋಕಿನ ಕೊಪ್ಪರವಳ್ಳಿ ಗ್ರಾಮದ ಈ ಪ್ರಕರಣದ 2 ನೇ ಆರೋಪಿಯ ಜೊತೆ ಬಾಲ್ಯ ವಿವಾಹ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ತನ್ನ ಜನ್ಮ ದಿನಾಂಕಃ 23.02.2003 ಆಗಿರುತ್ತದೆಂದು ತಿಳಿಸಿರುತ್ತಾರೆ. ನಂತರ ಸದರಿ ಮಾಹಿತಿಯನ್ನಾಧರಿಸಿ ದಿನಾಂಕಃ 01.06.2020 ರಂದು ನಾನು, ಚಾಸಾ-6 ಮತ್ತು ಚಾಸಾ-7 ಹಾಗು ಪೋಲೀಸ್

ಸಿಬ್ಬಂಧಿ ಜೊತೆ ಅಣ್ಣೂರು ಹೊಸಳ್ಳಿ ಗ್ರಾಮದ 1 ನೇ ಆರೋಪಿಯ ಮನೆಗೆ ಭೇಟಿ ನೀಡಿ ಚಾಸಾ-2 ರವರನ್ನು ವಿಚಾರಿಸಿದಾಗ ತನಗೆ ಬಾಲ್ಯ ವಿವಾಹವಾಗಿರುತ್ತದೆ ಮತ್ತು ಅದೇ ದಿವಸ ತನ್ನನ್ನು ಮದುವೆಯಾಗಿರುವ 2 ನೇ ಆರೋಪಿ ಮತ್ತು ಅವರ ಮನೆಯವರು ಬಂದು ಅವರ ಮನೆಗೆ ಕರೆದುಕೊಂಡು ಹೋಗುತ್ತಾರೆಂದು ತಿಳಿಸಿರುತ್ತಾರೆ. ನಂತರ 1 ನೇ ಆರೋಪಿಯನ್ನು ವಿಚಾರಿಸಿದಾಗ ತನ್ನ ಮಗಳಿಗೆ ತನ್ನ ಮನೆಯಲ್ಲಿಯೇ ದಿನಾಂಕಃ 16.04.2020 ರಂದು ಬಾಲ್ಯ ವಿವಾಹ ಮಾಡಿರುವುದಾಗಿ ತಿಳಿಸಿರುತ್ತಾರೆ. ನಂತರ ಚಾಸಾ-2 ರವರನ್ನು ನಮ್ಮ ಕಛೇರಿಗೆ ಕರೆದುಕೊಂಡು ಬಂದು ಆಪ್ತ ಸಮಾಲೋಚನೆ ಮುಖಾಂತರ ಚಾಸಾ-2 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ರೀತಿ ಚಾಸಾ-2 ರವರು ತನ್ನ ಸ್ವಂತ ಬರವಣಿಗೆ ಮೂಲಕ ಲಿಖಿತವಾಗಿ ಹೇಳಿಕೆ ನೀಡಿರುತ್ತಾರೆ. ಇದೇ ಮಾಹಿತಿಯನ್ನು ದಿನಾಂಕಃ 31.05.2020 ರಂದು ದೂರವಾಣಿ ಮುಖಾಂತರ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಕರೆ ಮಾಡಿ ತಿಳಿಸಿರುತ್ತೇನೆಂದು ಹೇಳಿರುತ್ತಾರೆ. ಚಾಸಾ-2 ರವರ ಹೇಳಿಕೆಯನ್ನಾಧರಿಸಿ ದಿನಾಂಕಃ 01.06.2020 ರಂದು ಮಧ್ಯಾಹ್ನ 01.30 ಗಂಟೆಗೆ ಠಾಣೆಗೆ ಹಾಜರಾಗಿ ಲಿಖಿತ ದೂರು ಸಲ್ಲಿಸಿರುತ್ತೇನೆ. ನಾನು ದೂರು ಕೊಟ್ಟ ನಂತರ ಚಾಸಾ-2 ತನ್ನ ತಾಯಿ ಮನೆಗೆ ಹೋಗಲು ನಿರಾಕರಿಸಿದ್ದರಿಂದ ಅವರ ರಕ್ಷಣೆ ಮಾಡಲು ಮೈಸೂರಿನ ಬಾಲಕಿಯರ ಬಾಲಮಂದಿರಕ್ಕೆ ದಾಖಲಿಸಿರುತ್ತೇನೆ. ಚಾಸಾ-2 ರವರು ಲಿಖಿತವಾಗಿ ನೀಡಿದ್ದ ಹೇಳಿಕೆಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ದಿನಾಂಕಃ 01.06.2020 ರ ಚಾಸಾ-2 ರವರು ನೀಡಿರುತ್ತಾರೆಂದು ಹೇಳಿರುವ ಲಿಖಿತ ಹೇಳಿಕೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-1(ಎ) ಎಂದು ಗುರುತಿಸಲಾಯಿತು.

ನಾನು ದಿನಾಂಕಃ 01.06.2020 ರಂದು ಪೋಲೀಸ್ ಠಾಣೆಗೆ ನೀಡಿದ ದೂರನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-2(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಬಿ.ಎಸ್.ಯು. ವಕೀಲರಿಂದಃ**

ನಾನು ದೂರಿನ ಜೊತೆ ಚಾಸಾ-2 ರವರ ಜನನ ಪ್ರಮಾಣ ಪತ್ರವನ್ನು ಕೊಟ್ಟಿರುವುದಿಲ್ಲ ಆದರೆ ನಂತರ ಕೊಟ್ಟಿರುತ್ತೇನೆ. ನಾನು ಚಾಸಾ-2 ರವರ ಜನನ ಪ್ರಮಾಣ ಪತ್ರವನ್ನು ಪೋಲೀಸರಿಗೆ ನೀಡಿಲ್ಲವೆಂದರೆ ಸರಿಯಲ್ಲ. ಯಾವುದೇ ಬಾಲ್ಯ ವಿವಾಹ ನಡೆಯದಿದ್ದರು ನಾನು, ಮಹಿಳಾ ಸಾಂತ್ವಾನ ಕೇಂದ್ರದ ಸಹಾಯಕಿ ಮತ್ತು ಅಂಗನವಾಡಿ ಸಹಾಯಕಿ ಸೇರಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ಚಾಸಾ-2 ಮತ್ತು 2 ನೇ ಆರೋಪಿ ಮದುವೆಯಾಗಿರುತ್ತಾರೆಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಆದರೆ ಬಾಲಕಿಯ ಹೇಳಿಕೆಯ ಆಧಾರದ ಮೇಲೆ ದೂರು ದಾಖಲಿಸಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ನಾನು ಬಾಲಕಿಯನ್ನು ವಿಚಾರಿಸಿದಾಗ ದಾಖಲೆ ಇರುವುದಿಲ್ಲವೆಂದು ಹೇಳಿರುತ್ತಾರೆ. ಮದುವೆ ಬಾಲಕಿಯ ಮನೆಯಲ್ಲಿಯೇ ನಡೆದಿರುತ್ತದೆಂದು ಬಾಲಕಿ ಹೇಳಿರುತ್ತಾರೆ. ಬಾಲಕಿಯ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಯಾವುದೇ ಮಾಹಿತಿ ಕಲೆ ಹಾಕಿಲ್ಲ. ಮದುವೆಯ ಫೋಟೋಗಳನ್ನು ದೂರಿನ ಜೊತೆ ಹಾಜರುಪಡಿಸಿಲ್ಲ. ನಾನು ಅಣ್ಣೂರು ಹೊಸಹಳ್ಳಿಗೆ ಹೋದಾಗ ಚಾಸಾ-2 1 ನೇ

ಆರೋಪಿಯ ಮನೆಯಲ್ಲಿಯೇ ಇದ್ದಳು. ನಾನು ಮತ್ತು ಇತರೇ ಸಿಬ್ಬಂಧಿಗಳು ಹೋದಾಗ 1 ನೇ ಆರೋಪಿಯ ಮನೆಯಲ್ಲಿ ದೇವಸ್ಥಾನದ ಕಾರ್ಯಕ್ರಮವಿದ್ದು, ಸದರಿ ಕಾರ್ಯಕ್ರಮಕ್ಕೆ ಅವರ ಸಂಬಂಧಿಕರಲ್ಲಿರೂ ಬಂದಿರುವುದನ್ನು ನೋಡಿ ನಾನು ಮದುವೆ ಕಾರ್ಯಕ್ರಮ ಇತ್ತು ಎಂದು ಸುಳ್ಳು ಮಾಹಿತಿ ಕಲೆ ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಅಕ್ಕ-ಪಕ್ಕದವರನ್ನು ವಿಚಾರಿಸಿರುತ್ತೇನೆ ಆದರೆ ಅವರು ಸಹಿ ಮಾಡಲು ನಿರಾಕರಿಸಿರುತ್ತಾರೆ. ಚಾಸಾ-2 ಮತ್ತು 2 ನೇ ಆರೋಪಿಯ ನಡುವೆ ಯಾವುದೇ ಬಾಲ್ಯ ವಿವಾಹ ನಡೆಯದಿದ್ದರು 1 ನೇ ಆರೋಪಿಯ ಕುಟುಂಬಕ್ಕೆ ಆಗದೇ ಇದ್ದವರು ನೀಡಿದ ಸುಳ್ಳು ದೂರಿನ ಆಧಾರದ ಮೇರೆಗೆ ನಮ್ಮ ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ದೂರನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಾವು ಚಾಸಾ-2 ರವರ ಮನೆಗೆ ಹೋದಾಗ ಬೆಳಿಗ್ಗೆ ಸುಮಾರು 11.30 ಗಂಟೆಯಾಗಿತ್ತು. ಅದೇ ದಿವಸ ಬಾಲಕಿಯನ್ನು ನಮ್ಮ ಕಛೇರಿಗೆ ಕರೆದುಕೊಂಡು ಬಂದು ಹೇಳಿಕೆ ಪಡೆದಿರುತ್ತೇನೆ. ಹೇಳಿಕೆ ಪಡೆಯುವಾಗ ಸುಮಾರು 12.30 ಗಂಟೆಯಾಗಿತ್ತು. ಚಾಸಾ-2 ರವರು ಯಾವುದೇ ಹೇಳಿಕೆ ನೀಡದಿದ್ದರು ನಮ್ಮ ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿಗಳ ಪರ ಶ್ರೀ. ಎಂ.ಎಸ್.ಕೆ. ವಕೀಲರಿಂದಃ**

1 ನೇ ಆರೋಪಿಯ ಮನೆಯ ಅಕ್ಕ-ಪಕ್ಕದವರು ಸಹಿ ಮಾಡಲು ನಿರಾಕರಿಸಿರುತ್ತಾರೆಂದು ನಾನು ವರದಿ ಮಾಡಿಲ್ಲ. ನಾನು ಪೋಲೀಸರಿಗೆ ನೀಡಿರುವ ದೂರಿನಲ್ಲಿ ಚಾಸಾ-2 ರವರು ಯಾವ ಮೊಬೈಲ್ ನಂಬರ್ ನಿಂದ ಫೋನ್ ಮಾಡಿರುತ್ತಾರೆಂದು ನಮೂದಿಸಿಲ್ಲ. ನಾನು ಅಣ್ಣೂರು ಹೊಸಹಳ್ಳಿಗೆ ಹೋದಾಗ

ವಿವಾಹ ಆಮಂತ್ರಣ ಪತ್ರಿಕೆಯನ್ನು ವಶಪಡಿಸಿಕೊಂಡಿಲ್ಲ. ಚಾಸಾ-2 ರವರ ಜನ್ಮ ದಿನಾಂಕಕ್ಕೆ ಸಂಬಂಧಿಸಿದ ಶಾಲಾ ದಾಖಲಾತಿಯನ್ನು ಅಣ್ಣೂರು ಹೊಸಹಳ್ಳಿ ಪ್ರಾಥಮಿಕ ಶಾಲೆಯಿದ ಪಡೆದು ಪೋಲೀಸರಿಗೆ ಕೊಟ್ಟಿರುತ್ತೇನೆ. ಸಾಮಾನ್ಯವಾಗಿ ಮದುವೆ ಸಮಾರಂಭ ನಡೆದರೆ ವಧು ಮತ್ತು ವರನ ಮನೆಯಲ್ಲಿ ಚಪ್ಪರ ಹಾಕುವ ಸಂಪ್ರದಾಯವಿರುತ್ತದಂದರೆ ಸರಿ ಆದರೆ ಬಾಲ್ಯ ವಿವಾಹ ಮಾಡುವವರು ಯಾರಿಗು ಗೊತ್ತಾಗದಂತೆ ಚಪ್ಪರ ಹಾಕದೇ ಮದುವೆ ಮಾಡಿರುತ್ತಾರೆ. ನಾನು ಚಾಸಾ-2 ರವರ ಮನೆಗೆ ಹೋದಾಗ ಚಪ್ಪರ ಹಾಕಿದ ಕುರುಹುಗಳಿರಲಿಲ್ಲ. ಚಾಸಾ-2 ರವರಿಗೆ ಯಾವುದೇ ಬಾಲ್ಯ ವಿವಾಹ ಮಾಡಿಲ್ಲ ಆದ್ದರಿಂದ ಅವರ ಮನೆಯಲ್ಲಿ ಯಾವುದೇ ಚಪ್ಪರ ಹಾಕಿರುವ ಕುರುಹುಗಳಿರಲಿಲ್ಲವೆಂದರೆ ಸರಿಯಲ್ಲ. ಚಾಸಾ-2 ಯಾವುದೇ ರೀತಿ ದೂರವಾಣಿ ಕರೆ ಮಾಡಿಲ್ಲದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-2 ರವರು ಯಾವುದೇ ಹೇಳಿಕೆ ನೀಡದಿದ್ದರೂ ಒತ್ತಾಯಪೂರ್ವಕವಾಗಿ ಅವರಿಂದ ಹೇಳಿಕೆ ಪಡೆದು ಅವರ ಸಹಿ ಪಡೆದಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**